OS No. 26/2016

DW-4

**(ಇಂದು ದಿಃ 04-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.RM ವಕೀಲರಿಂದಃ-**

ಸಿದ್ದಣ್ಣ ತಂದೆ ಸಾಬಣ್ಣ ತೀರಿಹೋಗಿ ಇಂದಿಗೆ ಅಂದಾಜು 40-42 ವರ್ಷ ಆಯಿತು ಎಂದರೆ ನನಗೆ ಗೊತ್ತಿಲ್ಲ. ಯಾವ ವರ್ಷ ತೀರಿಹೋದರು ನನಗೆ ಗೊತ್ತಿಲ್ಲ. ಸಿದ್ದಣ್ಣ ತಾಯಿ ತೀರಿಹೋಗಿದ 20 ವರ್ಷ ಆಯಿತು ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಸಾಬಣ್ಣನಿಗೆ ಇಬ್ಬರು ಹೆಂಡತಿಯರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣನಿಗೆ ಸಿದ್ದಣ್ಣನ ತಾಯಿ ಬಸಮ್ಮ ಒಬ್ಬಳೆ ಹೆಂಡತಿ ಎಂದರೆ ಸರಿಯಲ್ಲ. ಭೀಮಣ್ಣ ದ್ಯಾವಪ್ಪ ಮತ್ತು ಕಾಶಪ್ಪ ಸಾಬಣ್ಣನ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣ ಮತ್ತು ಸಾಬ್ಬಮ್ಮಳ ಮದುವೆ ಯಾವ ವರ್ಷ ಆಯಿತು ನನಗೆ ಗೊತಿಲ್ಲ. ಸಾಬಣ್ಣ ಯಾವ ವರ್ಷ 2ನೇ ಮದುವೆ ಆದರು ನನಗೆ ಗೊತ್ತಿಲ್ಲ. ಮದುವೆ ಎಲ್ಲಿ ಆಯಿತು ನನಗೆ ಗೊತ್ತಿಲ್ಲ. ಸಿದ್ದಣ್ಣ ಸಾಬಣ್ಣನ ಮಗ ಎಂದರೆ ಸರಿ.

ಸಾಬಣ್ಣ ಜಮೀನನ್ನು ತಿಪ್ಪಣ್ಣ ರವರಿಗೆ ಮಾರಾಟ ಮಾಡಿದ್ದರು. 6000/- ರೂ. ಗೆ ಖರೀದಿ ಮಾಡಿದ್ದರು. 6000/- ರೂ.ಗೆ ಮಾರಾಟ ಮಾಡಿದ್ದರು ಎಂದು ನನ್ನ ತಂದೆ ನನಗೆ ಹೇಳಿದ್ದರು ಆದರೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಖರೀದಿ ಪತ್ರ ನಾನು ನೋಡಿಲ್ಲ. ಸಾಬಣ್ಣ ತಿಪ್ಪಣ್ಣ ರವರಿಗೆ ಬರೆದುಕೊಟ್ಟ ಖರೀದಿ ಪತ್ರ ನೋಂದಣಿ ಆಗಿರಲಿಲ್ಲ. ತಿಪ್ಪಣ್ಣ 6000/- ರೂ. ಖರೀದಿ ಮಾಡಿದ್ದರು ಎಂದು ನನ್ನ ತಂದೆ ನನಗೆ ಹೇಳಿದ್ದರು ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ತಿಪ್ಪಣ್ಣ ಸಾಬಣ್ಣನಿಂದ 6000/- ರೂ.ಗಳಿಗೆ ಜಮೀನು ಖರೀದಿ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಬಣ್ಣ ಆಗಲಿ ಆತನ ಮಕ್ಕಳು ಆಗಲಿ ಜಮೀನನ್ನು ತಿಪ್ಪಣನಿಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜಮೀನನ್ನು ತಿಪ್ಪಣ್ಣನ ಸೊಸೆ 4ನೇ ಪ್ರತಿವಾದಿಯಿಂದ ಖರೀದಿ ಮಾಡಿದ್ದಾರೆ. ಜಮೀನು ಖರೀದಿ ಮಾಡುವಾಗ ತಿಪ್ಪಣ್ಣನಿಗೆ ಜಮೀನು ಹೇಗೆ ಬಂತು ಎಂದು ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿದ್ದೇವೆ.

ತಿಪ್ಪಣ್ಣನ ಮಕ್ಕಳ ನುಡವೆ 1987-88 ರಲ್ಲಿ ಭಾಗ ಆಗಿದೆ. ಅವರು ಕಂದಾಯ ದಾಖಲಾತಿಗಳನ್ನು ಬದಲಾವಣಿ ಮಾಡಿಕೊಳ್ಳುವ ಮೂಲಕ ಭಾಗ ಮಾಡಿಕೊಂಡಿದ್ದರು.

ವಿಭಾಗ ಪತ್ರ ಆಗಿರಲಿಲ್ಲ, ವಿಭಾಗ ಆಗುವಾಗ ಯಾರು ಯಾರು ಇದ್ದರು ನನಗೆ ಗೊತ್ತಿಲ್ಲ. 4ನೇ ಪ್ರತಿವಾದಿ ಮಾರಾಟ ಮಾಡಿದ ಸ್ವತ್ತಿಗೆ ಮಾಲಿಕರು ಮತ್ತು ಕಬ್ಜಾದಾರರು ಆಗಿರಲಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ದಾವಾ ಸ್ವತ್ತಿಗೆ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಿದ್ದಣ್ಣನಿಗೆ ಗೊತ್ತಾಗದ ರೀತಿಯಲ್ಲಿ 1 ರಿಂದ 4ನೇ ಪ್ರತಿವಾದಿಯರು ಕಂದಾಯ ಅಧಿಕಾರಿಗಳ ಜೊತೆ ಶರಿಕ ಆಗಿ ತಮ್ಮ ಹೆಸರಿಗೆ ಸುಳ್ಳು ಮುಟೇಷನ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಉಪವಿಭಾಗಧಿಕಾರಿಗಳ ಮುಂದೆ ನಡೆದಿದ್ದ ನಡಾವಳಿಯಲ್ಲಿ ಸಿದ್ದಣ್ಣ ಅಥವಾ ಅವರ ಮಕ್ಕಳು ಪಾರ್ಟಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ನಡಾವಳಿ ಸಿದ್ದಣ್ಣ ಮತ್ತು ಅವರ ಮಕ್ಕಳಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸಿದ್ದಣ್ಣ ಹೊಟ್ಟೆಪಾಡಿಗಾಗಿ ಮುಂಬೈನಲ್ಲಿ ಇದ್ದರು ಎಂದರೆ ಸರಿಯಲ್ಲ. ಆತನ ಗೈರು ಹಾಜರಿಯಲ್ಲಿ 1 ರಿಂದ 4ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಮುಟೇಷನ ಮಡಿಕೊಂಡಿದ್ದರು ಎಂದರೆ ಸರಿಯಲ್ಲ. ಜಮೀನು ಮಾರಾಟ ಮಾಡುವ ಹಕ್ಕು 4ನೇ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ.

ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ರವರ ಪೈಕಿ ಈಗ ದ್ಯಾವಪ್ಪ ಮಾತ್ರ ಬದುಕಿದ್ದಾರೆ. ದ್ಯಾವಪ್ಪ ನನ್ನೊಂದಿಗೆ ಮಾತನಾಡುತ್ತಾರೆ. ಈ ದಾವೆ ವಿಚಾರಣೆ ನಡೆದಿರುವ ಸಂಗತಿ ದ್ಯಾವಪ್ಪನವರಿಗೆ ಗೊತ್ತಿದೆ ಎಂದರೆ ಸರಿಯಲ್ಲ. ಈ ದಾವೆ ಇರುವ ಬಗ್ಗೆ ನಾನು ದ್ಯಾವಪ್ಪನವರಿಗೆ ಹೇಳಿಲ್ಲ. ಈ ದಾವೆ ಬಗ್ಗೆ ದ್ಯಾವಪ್ಪನವರಿಗೂ ಗೊತ್ತಿದೆ ಎಂದರೆ ಸರಿಯಲ್ಲ. ಅವರಿಗೆ ಗೊತ್ತಿದ್ದರೂ ಕೂಡ ಸಾಬಣ್ಣ ಮತ್ತು ಅವರಿಗೆ ಯಾವುದೇ ಸಂಬಂಧ ಇರದ ಕಾರಣ ಈ ದಾವೆಯಲ್ಲಿ ಹಾಜರಾಗಿಲ್ಲ ಎಂದರೆ ಸರಿಯಲ್ಲ. ದ್ಯಾವಪ್ಪ ಕೊಡ್ಲಾದಲ್ಲಿ ವಾಸವಾಗಿದ್ದಾರೆ. ಸಾಬಣ್ಣ ನ ಮೊದಲನೆ ಹೆಂಡತಿ ಲಕ್ಷ್ಮಮ್ಮ, ಭೀಮಣ್ಣ, ದ್ಯಾವಪ್ಪ ಮತ್ತು ಕಾಶಪ್ಪ ರವರು ಸಾಬಣ್ಣ ಮತ್ತು ಲಕ್ಷ್ಮಮ್ಮ ರವರ ಮಕ್ಕಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂಬರ 752 ಮುಂಚೆ 8 ಎಕರೆ 19 ಗುಂಟೆ ಇತ್ತು. ಅದು ಸಾಬಣ್ಣ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಆತನೇ 8 ಎಕರೆ 19 ಗುಂಟೆ ಗೆ ಮಾಲಿಕ ಮತ್ತು ಕಬ್ಜಾದರನಾಗಿದ್ದ ಎಂದರೆ ಸರಿ. ಇವತ್ತಿಗೂ ಸರ್ವೆ ನಬಂರ 752 ರಲ್ಲಿ 2ಎಕರೆ ಸಿದ್ದಣ್ಣನ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ಹೆಂಡತಿ ಹೆಸರಿನಲ್ಲಿ ಪೆಟ್ರೋಲ ಬಂಕ ಇದೆ. ಶಿವಲಿಂಗಯ್ಯ ತಂದೆ ಗುಂಡಯ್ಯ ಸ್ವಾಮಿ ನಮ್ಮ ಪೆಟ್ರೋಲ ಬಂಕನಲ್ಲಿ ಕೆಲಸ ಮಾಡುತ್ತಾರೆ ಎಂದರೆ

ಸರಿಯಲ್ಲ, ಕಾರಣ ನಮ್ಮ ಪರವಾಗಿ ಸುಳ್ಳು ಸಾಕ್ಷಿ ಹೇಳಿದ್ದಾರೆ ಎಂದರೆ ಸರಿಯಲ್ಲ, ನಾನು ದಾವಾ ಸ್ವತ್ತಿಗೆ ಯಾವುದೇ ರೀತಿ ಸಂಬಂಧ ಪಟ್ಟಿಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**